ಹೋದೆ. ಹಾಗೆ ಎರಡು, ಮೂರು, ನಾಲ್ಕು ದಿನ ಊಹುಂ, ಅಮ್ಮ ಬರಲೇ ಇಲ್ಲ. ನನಗೆ ಜ್ವರ ಬಂತು. ಅಮ್ಮನ ಸ್ಪರ್ಶಕ್ಕಾಗಿ ಇನ್ನಿಲ್ಲದಂತೆ ಕಾದೆ. ನಿದ್ದೆಯಲ್ಲಿ ಅತ್ತೆ. ಔಷಧಿ ಕೊಟ್ಟ ಅತ್ತೆಯ ಕೈಯನ್ನು ಕೋಪದಿಂದ ಹಿಂದಕ್ಕೆ ತಳ್ಳಿದೆ. ಹತ್ತು ದಿನಕ್ಕೆ ಜ್ವರ ಇಳಿಯಿತು. ಬಾಚದೆ ಗಂಟಿಕ್ಕಿದ ಕೂದಲಲ್ಲಿ ಹೇನು ಲಕಲಕ ಆಡುತ್ತಿದ್ದವು. ತಲೆಸೀಳುವಂತಿದ್ದ ಬಾಚಣಿಗೆ ತಂದು ಅತ್ತೆ ಎರ್ರಾಬಿರ್ರಿ ಬಾಚಿದಳು. ತಲೆಯಲ್ಲಾ ಉರಿ. ಅಮ್ಮನ ಬಗ್ಗೆ ಅತ್ತೆ ಬರೀ ಕೆಟ್ಟ ಮಾತನ್ನೇ ಆಡುತ್ತಾಳೆ. ಬಯ್ಯುತ್ತಾಳೆ. ಕೋಲು ಹಿಡಿದು ಅವಳ ನೆತ್ತಿಗೊಂದು ಬಾರಿಸಿ ಮನೆಯಿಂದ ಹೊರದಬ್ಬಬೇಕೆನ್ನುವಷ್ಟು ಸಿಟ್ಟು ಬರುತ್ತಿತ್ತು.

"ನಮ್ಮ ಮನೆಯಿಂದ ಹೋಗಿಬಿಡು" ಎಂದು ಬಾಚಣಿಗೆ ಕಸಿದುಕೊಂಡು ಅವಳ ಕೈಮೇಲೆ ಸಿಟ್ಟು ತಣಿಯುವವರೆಗೂ ಗೀರಿದೆ. ಕೆಂಪು ಗೆರೆಗಳೊಳಗಿಂದ ರಕ್ತ ಹನಿಹನಿಯೇ ಚಿಮ್ಮತೊಡಗಿತ್ತು. ಅವಳು ನನಗೆ ಹೊಡೆಯುತ್ತಾಳೇನೋ ಅಂದುಕೊಂಡಿದ್ದೆ. ಅಪ್ಪನಿಗೆ ಹೇಳಿ ಹೊಡೆಸುತ್ತಾಳೇನೋ ಅಂದುಕೊಂಡಿದ್ದೆ. ಆದರೆ, ಏನೂ ಅನ್ನಲಿಲ್ಲ. ಕಣ್ಣೊರಿಸಿಕೊಳ್ಳುತ್ತಾ ನನ್ನನ್ನು ಬಳಿಗೆ ಸೆಳೆದುಕೊಂಡು, "ನನ್ನನ್ನ ಹೋಗು ಅಂದ್ರೆ ಇಂದೇ ಹೋಗಿಬಿಡ್ತೀನಿ. ಆದ್ರೆ, ನಾನು ಹೋದ್ರೆ ಮನೆಯಲ್ಲಿ ಮಾಡಿ ಬಡಿಸುವ ಹೆಣ್ಣಿಲ್ಲದೆ ನಿಮ್ಮಪ್ಪ ಇನ್ನೊಂದು ಮದಿವಿ ಮಾಡ್ಕೋತಾನೆ. ಮದುವೆಯಾಗಿ ಬರುವಾಕಿ ನಿನಗೆ ಹಿಂಗ ತಲೆ ಬಾಚಲ್ಲ, ಹೇನು ನೋಡಲ್ಲ, ನೀನು ತಳ್ಳಿದ್ರೂ ಮುದ್ದುಮಾಡಿ ಗುಳಿಗಿ ಕೊಡಲ್ಲ. ನೀನು ಸಣ್ಣವಳು. ಹತ್ತು ವರ್ಷಾನೂ ತುಂಬದ ಹಸುಗೂಸು. ನಿನಗೆ ಇದೆಲ್ಲಾ ಗೊತ್ತಿಲ್ಲ. ಒಂದಂತೂ ಖರೆ, ನಿಮ್ಮಮ್ಮ ಇನ್ನು ಬರಲ್ಲ. ನಿಮ್ಮನ್ನ ಬಿಟ್ಟು ಹೋಗ್ಯಾಳ. ನಿಮ್ಮಪ್ಪ ಬಾ ಅಂದ್ರೇನಾ ಬಂದೀನಿ ನಿನ ಸಲುವಾಗಿ" ಎಂದಳು. ಅತ್ತೆಯ ಮಗನೂ ಸೊಸೆಯೂ ಎಲ್ಲೋ ದೂರದಲ್ಲಿರುತ್ತಾರೆ. ಅವಳೊಬ್ಬಳೇ ವಿಜಯವಾಡದಲ್ಲಿ ಇರುತ್ತಾಳೆ. ಮಗ–ಸೊಸೆಯರಿಗೂ ಇವಳಿಗೂ ಆಗಿಬರದೆಂದು ಹೇಳುತ್ತಿದ್ದಳು ಅಮ್ಮ.

"ಅಮ್ಮ ನಿಜವಾಗ್ಲೂ ಇನ್ನ ಬರಲ್ಲಾ ಅಣ್ಣ?" ಎಂದು ಕೇಳಿದರೆ ಹೌದೆಂದ. ನನಗಿಂತಲೂ ನಾಲ್ಕೇ ವರ್ಷ ದೊಡ್ಡವನಾದರೂ, ಅಣ್ಣ ನನ್ನನ್ನೆಷ್ಟೋ ಸಮಾಧಾನಗೊಳಿಸುತ್ತಿದ್ದ. ಊಟ ಮಾಡದಿದ್ದರೆ ರಮಿಸುತ್ತಿದ್ದ. ತಿಂಗಳ ಅನಂತರ ಬಟ್ಟೆ, ಪುಸ್ತಕ ಗಂಟುಕಟ್ಟಿಕೊಂಡು ಹೈದರಾಬಾದಿನಲ್ಲಿರುವ ಹಾಸ್ಟೆಲೊಂದಕ್ಕೆ ಹೋಗಿಬಿಟ್ಟ. ಅಪ್ಪ, ಅತ್ತೆ ಕಳಿಸಿಬಿಟ್ಟರು. ಗಂಡುಹುಡುಗ ಚೆನ್ನಾಗಿ ಓದಿಕೊಳ್ಳಬೇಕಂತೆ. ಇಲ್ಲಿದ್ದರೆ ಓದಲಾರನಂತೆ. ಆಗ ನನಗೆ ಯಾರೂ ಇಲ್ಲವೆಂದು ಅದೆಷ್ಟು ಅತ್ತಿದ್ದೆನೋ!

ನಾನು ಸ್ಕೂಲಿನಿಂದ ಓಡುತ್ತಾ ಬಂದು ಬುಟ್ಟಿಯಷ್ಟು ಆಸೆ ಹೊತ್ತುಕೊಂಡು ನೇರವಾಗಿ ಅಡುಗೆಮನೆಯೊಳಗೆ ಹೋಗುತ್ತೇನೆ, ಅಮ್ಮ ಬಂದಳೇನೋ ಎಂದು. ಅಮ್ಮ ಬಂದಿಲ್ಲ. ಅಳು ಬರುತ್ತದೆ. ಅತ್ತೆ ಕೊಟ್ಟ ಹಾಲನ್ನು ಕುಡಿಯದೆ ಅಳುತ್ತಾ ಹೊರ ನಡೆದುಬಿಡುತ್ತೇನೆ. ಅವಳು ಮೊದಲು ಕೋಪಗೊಳ್ಳುತ್ತಾಳೆ. ಬಳಿಕ ರಮಿಸುತ್ತಾಳೆ. ಅವಳಿಗೂ ಕಣ್ಣಲ್ಲಿ ನೀರು ತಿರುಗುತ್ತವೆ. ಅವಳನ್ನು ಅಳುವಂತೆ ಮಾಡಿದರೆ ನನ್ನ ಮೈಮನಸ್ಸು ಹಗುರವಾದಂತೆನಿಸುತ್ತದೆ. ಅವಳೇ ಅಮ್ಮನನ್ನು ಮನೆಯಿಂದ ಹೊರದೂಡಿದ್ದಾಳೆಂದು ಆಗಾಗ ಅನುಮಾನವೂ ಬರುತ್ತದೆ. ಅವಳ ಕಣ್ಣೀರು ನೋಡಿದ ಮೇಲೆ, ಹಾಲನ್ನು ಒತ್ತಾಯಪೂರ್ವಕವಾಗಿ ಕುಡಿದು ಜಗಲಿಯಲ್ಲಿ ಕೂರುತ್ತೇನೆ.

"ಹೋಗಿ ಸಂಗೀತ ಕಲೀ ಬಾರದೇನೇ!" ಎನ್ನುತ್ತಾಳೆ ಅತ್ತೆ.

ಸಂಗೀತ ಬೇಡ. ಸೌಂದರ್ಯ ಅವರ ಅಮ್ಮ ಒಳ್ಳೆಯವಳಲ್ಲ. ಅಮ್ಮನ ಬಗ್ಗೆ ಅತ್ತೆಯ ಹಾಗೆಯೇ ಕೆಟ್ಟದಾಗಿ ಮಾತನಾಡುತ್ತಾಳೆ. ಆಕೆ ಹೇಳಿಕೊಡುವ ಸಂಗೀತ ನನಗೆ ಹಿಡಿಸುವುದಿಲ್ಲ ಈಗ. ಸ್ಕೂಲಿನಲ್ಲಿ ಶೆಟಲ್ ಆಡುವುದು ಬಿಟ್ಟುಬಿಟ್ಟಿದ್ದೇನೆ. ಕ್ವಾರ್ಟರ್ಲೀ ಪರೀಕ್ಷೆಗಳಲ್ಲಿ ಎಲ್ಲ ವಿಷಯಗಳಲ್ಲೂ ಫೇಲಾದೆ. ಅಪ್ಪನೊಂದಿಗೆ ಮಾತನಾಡುವುದು ಕಡಿಮೆಯೇ. ಆದರೂ ಈಗವರು ಯಾರೊಡನೆಯೂ ಮಾತನಾಡುತ್ತಿಲ್ಲ. ಪ್ರೋಗ್ರೆಸ್ ಕಾರ್ಡ್ ನೋಡಿದ ದಿನ ನನ್ನನ್ನು ಕರೆದ. ಕೂಡಲು ಹೇಳಿದ,